Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 21] ಗುರುವಾರ 16—10—47 [ಬಿಡಿ ಪ್ರತಿ 3 ಪೈ

ಜುನಘಡ ರಣರಂಗವಾಗುವುದೆ?

ಎರಡು ಡೊಮಿನಿಯರ್ಸ್

ಗಳಿಗೆಸೇರಿದ ಸಂಸ್ಥಾನ

ನವದೆಹಲಿ ಅ 14— ಜುನಘಡ್ಡಿಗೆ ಇಂಡಿಯಾ ಸಂಸ್ಥಾನ ಇಲಾಖಾ ಕಾರ್ಯದರ್ಶಿಗಳು ಹೋಗಿದ್ದಾಗ ಮಾಂಗ್ರಿಲ್ಲಿನ ಷೇಕ್ ಭಾರತ ಡೊಮಿನಿಯನ್ನಿಗೆ ಸೇರಲು ಒಪ್ಪಿ ರಜು ಮಾಡಿದರು. ಇದಾದ ಒಂದು ಗಂಟೆಯಲ್ಲಿ ಷೇಕ್ ರನ್ನು ಜುನಗಡಿ ಸೈನ್ಯ ಮುತ್ತಲು ಭೀತಿಗೊಂಡು ಪಾಕಿಸ್ತಾನಕ್ಕೆ ಸೇರಲು ರುಜು ಮಾಡಿದರು. ಅಲ್ಲದೆ ಭಾರತ ಡೊಮಿನಿಯನ್ನಿಗೆ ಒಪ್ಪಿಗೆ ವಜಾಮಾಡಬೇಕೆಂದು ಸಿದ್ಧ ಪಡಿಸಿದ್ದ ತಂತಿಗೆ ರುಜು ಮಾಡಿದರು. ಈ ವಿಚಿತ್ರ ಪರಿಸ್ಥಿತಿಯ ಸ್ವಾರಸ್ಯ ಮುಂದೆ ನೋಡಬೇಕು.

ಪಾಕೀಸ್ತಾನಕ್ಕೆ ರಷ್ಯಾ ಭಯವೆ ?

ನ್ಯೂಯಾರ್ಕ್, ಅ 13 — ಪಾಕೀಸ್ತಾನಕ್ಕೆ ಒಂದು ಕಡೆ ಇಂಡಿಯಾ ಮತ್ತೊಂದು ಕಡೆ ರಷ್ಯಾ ಬೆಂಬಲದ ಅಫ್ಘಾನಿಸ್ತಾನದ ಭಯವಿರುವುದೆಂದೂ ಅದಕ್ಕಾಗಿ ಅಮೇರಿಕಾ ಸಹಾಯ ಪಡೆಯಲು ಪ್ರಯತ್ನಿಸುತ್ತಿರುವುದೆಂದೂ ಹೇಳಲಾಗುತ್ತಿದೆ.

ಜುನಘಡ ರಣಕಹಳೆ

ನವದೆಹಲಿ, ಅ 14 — ಪಾಕೀಸ್ತಾನಕ್ಕೆ ಸೇರಿರುವ ಕಾಥಿವಾಡ ಸಂಸ್ಥಾನವಾದ ಜುನಗಡ ಹಿತವಾತಾವರಣದಿಂದ ಕೂಡಿಲ್ಲ ಅಲ್ಲಿಗೆ ಈಗ 800 ಮಂದಿ ಪಾಕೀಸ್ತಾನದಿಂದ ದರ್ಶನಕಾರರಾಗಿ ಬಂದಿದ್ದಾರೆ ಇವರೆಲ್ಲ ಮಾಜೀ ಸೈನಿಕರು ಇವರಿಗೆಲ್ಲಾ ಸಂಸ್ಥಾನದಿಂದ ಶಸ್ತ್ರಾಸ್ತ್ರಗಳನ್ನು ಕೊಡಲಾಗಿದೆ ಇದರ ಜೊತೆಗೆ ಸಂಸ್ಥಾನದ ಖೈದಿಗಳೆಲ್ಲ ಬಿಡಲ್ಪಡುವರೆಂದು ಹೇಳಲಾಗಿದೆ

ನೇಪಾಳ ರಾಜರ ಮನವಿ

ರಷ್ಯಾಲ', ಅ 14 — ನೇಪಾಳವು ವರ್ಷಕ್ಕೆ 60 ಲಕ್ಷ ರೂ ಗಳನ್ನು ಪರದೇಶ ಸಿಗರೇಟಿಗಾಗಿ ವ್ಯಯಮಾಡುತ್ತಿದೆ ಅದಕ್ಕೆ ಮನಸೊಂದು ಅಲ್ಲಿ ರಾಜರು ತಮ್ಮ ಪ್ರಜೆಗಳನ್ನು ಕುರಿತು ಸಿಗರೇಟು ಸೇದುವುದು ಬಿಡಿರೆಂದೂ ಅದು ಆಗದಿದ್ದಲ್ಲಿ ಹುಕ್ಕ ಸೇದಿರೆಂದೂ ಪರದೇಶ ವಸ್ತುವಿಗೆ ಹಣಹಾಕಬೇಡಿಯೆಂದು ಮನವಿ ಮಾಡಿದ್ದಾರೆ

ಅಡ್ವೊಕೇಟರಾಗಿ ಸೇರುವ ಹರಿಜನರಿಗೆ ಫೀ ಮನ್ನಾ ಮಾಡಲು ಮುದರಾಸು ಸರ್ಕಾರ ನಿರ್ಧರಿಸಿದೆ

ಂ ಂ

ಪೇರಿಸ್ನಲ್ಲಿ ಮೂವತ್ತು ಸ್ಟ್ರೀಮ್ ವಾಹನ ಕೆಲಸಗಾರರು ಮುಷ್ಕರ ಹೂಡಿದ್ದಾರೆ

ಂ ಂ

ಈಸೂರು ಮತ್ತು ಶ್ರವಣ ಬೆಳಗೊಳ ಖೈದಿಗಳ ಖುಲಾಸೆ ಅಜ್ಞೆಯಾಯಿತು

ಂ ಂ

ನವದೆಹಲಿ, ಅ 14 — ಪಾಕೀಸ್ತಾನವು ಅಲಿಗಡದಿಂದ ಸೇನೆಗೆ ಜನರನ್ನು ಸೇರಿಸಿಕೊಳ್ಳುವುದೆಂದು ಹೇಳಲಾಗಿದೆ

ಂ ಂ

ಲಕ್ನೋ, ಅ 14 — ಸಂಯುಕ್ತ ಸ್ವಾಂತ್ಯದಲ್ಲಿ ಹಿಂದಿ ಸರಕಾರಿ ಭಾಷೆಯಾಗಿ ಮಾಟಲ್ಪಟ್ಟಿದೆ

ಂ ಂ

ನವದೆಹಲಿ ಅ 14 — ಪಶ್ಚಿಮ ಪಂಜಾಬಿನ ಮಾನ್ಟ್ವಾಲಿಂದ ಭಾರತ ಸೈನ್ಯ ವಾಪಸ್ಸಾದ್ದನ್ನು ನೋಡಿ, ಪಾಕಿಸ್ತಾನದ 10 ಸಾವಿರ ಮಂದಿ ಅಲ್ಲಿಗೆ ನುಗ್ಗಿ ಅಲ್ಲಿಯ ಮುಸ್ಲಿಮೇತರರನ್ನು ಹತ ಮಾಡಿದ ಹೃದಯ ವಿಚ್ಛೇದಕ ವಾರ್ತೆ ಬಂದಿದೆ

ಆರ್ಕಾಟ್ ರಾಮಸ್ವಾಮಿಯ ಜಸ್ಟಿಸ್ ಪಕ್ಷವನ್ನು ಮೂಲೆಗೆ ತಳ್ಳಿ

ಮೈಸೂರು, ಅ 16

ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ಅಮಾತ್ಯ ಶಿರೋಮಣಿ ತಂಬೂಚೆಟ್ಟಿ ಪದಚ್ಯುತರಾಗಿದ್ದರೆ ಸಮಂಜಸವಾಗಿತ್ತು

— ಹೀಗೆಂದು ಮದರಾಸಿನ ನಕೀಲರಾದ ಶ್ರೀ ಜೈರಾಂರವರು ನಿನ್ನೆ ಸಂಜೆ ಶ್ರೀ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ರಂಗಾಚಾರ್ಲು ಪುರಭವನದ ಆವರಣದಲ್ಲಿ ಸೇರಿದ್ದ ಪ್ರಚಂಡ ಸಭೆಯಲ್ಲಿ ಹೇಳಿದರು.

ಅವರು ಭಾಷಣವನ್ನು ಮುಂದುವರಿಸುತ್ತಾ,

ಆರ್ಕಾಟ್ ಮಹಾಚತುರರು. ಚರ್ಚಿಲರ ಶಿಷ್ಯರು. ಅವರು ಪ್ರಜೆಯ ಮೇಲೆ ಪ್ರಜೆಯನ್ನು ಎಬ್ಬಿಸಬಲ್ಲರು. ಪಕ್ಷಗಳ ಮೇಲೆ ಪಕ್ಷಗಳನ್ನು ಎತ್ತಿಕಟ್ಟಬಲ್ಲರು. ಕೋಮಿನ ಮೇಲೆ ಕೋಮನ್ನು ಎಬ್ಬಿಸಬಲ್ಲರು. ಅವರ ವಿಷಯದಲ್ಲಿ ಎಚ್ಚರಿಕೆಯಿಂದ ಇರಬೇಕು.

ಆರ್ಕಾಟ್ ರಾಮಸ್ವಾಮಿಯ ಜಸ್ಟಿಸ್ ಪಕ್ಷವನ್ನು ಮೂಲೆಗೆ ತಳ್ಳಿ. ಮದರಾಸಿನಲ್ಲಿ ಆ ಪಕ್ಷ ಎಷ್ಟು ತೀವ್ರ ರಾಜಯ ಪಡೆಯಿತೋ ಹಾಗೆಯೇ ಇಲ್ಲೂ ತಳ್ಳಿಬಿಡಿ.

— ಎಂದು ತಿಳಿಸಿದರು.

ಅಪರಾಧಕ್ಕೆ ತಕ್ಕ ಶಿಕ್ಷೆ

ಕಾಂಗ್ರೆಸ್ ನಾಯಕರುಗಳ ಮೇಲೆ ಗುಂಡು ಬಿದ್ದು ಸತ್ತಿದ್ದರೆ ಎಂದಿಗೂ ನಾವು ಅಳುತ್ತಿರಲಿಲ್ಲ. ವಿದ್ಯಾರ್ಥಿಗಳ ಮೇಲೆ, ಸ್ತ್ರೀಯರ ಮೇಲೆ ಅತ್ಯಾಚಾರ ನಡೆದರೆ ಸಹಿಸುವುದು ಸಾಧ್ಯವೇ? ಆದಕ್ಕಾಗಿಯೇ ವಿಚಾರಣಾ ಸಮಿತಿ ನೇಮಕವಾಗಿದೆ.

ದಿವಾನರ ಮನೋಭಾವ ಒದಲಾಗಿದೆ. ಅವರು ಮಂತ್ರಿಮಂಡಲದಲ್ಲಿರುವರು.

ಅಕ್ಟೋಬರ್ ತೀರಿದನಂತರ ಸಂಸ್ಥಾನಾದ್ಯಂತ ಒಂದು ಮೂಟೆ ಅಕ್ಕಿ ದೊರೆಯಂತಾಗದು. ಆಹಾರ ಮಿತಿಯಿಂದ ಬಳಸಿ. ಎರಡು ತಿಂಗಳ ಧಾನ್ಯ ದಾಸ್ತಾನಿಟ್ಟುಕೊಂಡು ಉಳಿಕೆ ನಿಮ್ಮ ಸರಕಾರಕ್ಕೆ ಒಪ್ಪಿಸಿ

— ಎಂದು ಶ್ರೀ ಚನ್ನಯ್ಯನವರು ತಿಳಿಸಿದರು.

ಮರಿಸ್ವಾಮಿಯ ಸವಾಲ್

ಇಬ್ಬರು ಸ್ತ್ರೀಯರನ್ನು ಜೈಲಿಗೆ ಕಳುಹಿಸಿದರೆ ಮತ್ತಾವ ಸ್ತ್ರೀಯರೂ ಚ

ರೈಲ್ವೆ ಮುಷ್ಕರ ಏಕೆ ಸಂಭವಿಸಿತು?

ಮೈಸೂರು ಕಾಂಗ್ರೆಸ್ ಸತ್ಯಾಗ್ರಹ ಯಶಸ್ವಿಯಾಗಿ ಮುಕ್ತಾಯಗೊಳ್ಳಲಿ ಎಂಬ ಸದುದ್ದೇಶದಿಂದಲೇ ರೈಲ್ವೆಯವರು ಮುತ್ತೊಂದು ನವ ಶೋರಿ ಸತ್ಯಾಗ್ರಹ ಆರಂಭಿಸಿದರು ಜನತಾ ಸರ್ಕಾರಕ್ಕೆ ರೈಲ್ವೆಯವರ ಸಹಕಾರ ಸದಾ ಸಿದ್ಧ

— ಹೀಗೆಂದು ಶ್ರೀ ರೇವಣ್ಣನವರು ನಿನ್ನೆ ದಿವಸ ಟೌನ್‌ಹಾಲ್ ಆವರಣದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

ಳುವಳಿಗೆ ಸೇರುವುದಿಲ್ಲವೆಂದು ಇನ್‌ಸ್ಪೆಕ್ಟರ್ ಮರಿಸ್ವಾಮಿ ನಮ್ಮ ದಸ್ತಗಿರಿ ವೇಳೆ ಸವಾಲ್ ಮಾಡಿದರು. ಆದರೆ ಸ್ತ್ರೀಯರು ಜೈಲಿಗೆ ಬಂದರು. ಕೈಲಿದ್ದ ಧ್ವಜವನ್ನು ಕಿತ್ತು ತುಳಿದು ಅವಮಾನಪಡಿಸಿದರು. ವಿಚಾರಣಾ ಸಮಿತಿ ಅತ್ಯಾಚಾರಿಗಳನ್ನು ವಿಚಾರಿಸುವುದು.

— ಶ್ರೀಮತಿ ಲಕ್ಷ್ಮಮ್ಮನವರು ತಿಳಿಸಿದರು.

ಬೆಂಗಳೂರು, ಅ 15 — ದಿವಾನರಿಗೂ ಖಾತೆ ಕೊಡಲಾಗಿದೆ ದಿವಾನರ ಮೇಲೆ ಅವಿಶ್ವಾಸ ಸೂಚನೆಯಿಲ್ಲ ಪ್ರಧಾನಿಗಳ ಸ್ಥಾನವಾನ ನಿರ್ಧಾರವಾಗಲಿದೆ. ರಾಜ್ಯಾಂಗ ಸಭೆ ಜುನಾಯಿತ ಅಧ್ಯಕ್ಷನನ್ನು ಪಡೆಯುವುದು. ಮುಂತ್ರಿಮಂಡಲದ ಪ್ರಥಮಾಧಿವೇಶನ ದಿವಾನರ ಅಧ್ಯಕ್ಷತೆಯಲ್ಲಿ ಜರಗುವುದು — ಎಂದು ಶ್ರೀ ಕೆ ಸಿ ರೆಡ್ಡಿ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಮೈಸೂರು ಶ್ರೀಮನ್ಮಹಾರಾಜರು ಜವಾಬ್ದಾರಿ ಸರ್ಕಾರ ಅನುಗ್ರಹ ಮಾಡಿದ್ದರಿಂದ ಕರ್ನಾಟಕ ಸಿಂಹಾಸನಾಧೀಶರಾಗಬೇಕೆಂದು ಸೂಚನೆಗಳು ಬರುತ್ತಿವೆ ಎಂದು ಪಟ್ಟಾಭಿ ಸೀತಾರಾಮಯ್ಯನವರು ಬೊಂಬಾಯಿನಲ್ಲಿ ಮೈಸೂರು ಸಂಘದಲ್ಲಿ ಹೇಳಿದರು

ಪ್ಯಾಲಸ್ಟೈನ್ ವಿಭಜನೆಗೆ ರಷ್ಯಾ ಬೆಂಬಲವಿತ್ತಿದೆ

At Oper
2nd Glorious
PHA

Office of the
Rationing Officer
Mysore City
Dated 9th October 47
No. R 1 - 134 / 47

Notification

Applicatons in C.R,B. Forms are invited from Backward community candidates possessing minimum S. S. L. C. qualification with Typewriting and Shorthand far the post of a Steno-typist in this Office.

The post carries a pay of Rs, 50 with usual dearness allowance, Intending candidates may apply to the undersigned on or before 20 th October 1947.

M. Srinivasalu Naidu
Rationing Officer
Mysore City

Edited, Printed and Published by M. S Krishna Rao at the Satyavadi Press Chamaarja Agrahar Mysore.

ಧರ್ಮಯುದ್ಧ ಸಮಾಚಾರ

ಪ್ರ— ರಾಜಾ ಎಸ್. ಗುರುರಾಜಾಚಾರ್
ಅಖಿಲ ಕರ್ನಾಟಕ ಸನಾತನಿಗಳ ಸಂಘ
ಮಂತ್ರಾಲಯ

ಗೋವಧೆ ನಿಂತಿತು

ಮಿಾರತ್ 16-9-47— ಶ್ರೀ ಕರ ಪಾತ್ರಜೀಯವರಿಂದ ತಾ || 28-4-47 ರಿಂದ, ಗೋವಧೆ ನಿಲ್ಲಲಿ ಮೊದಲಾದ ಬೇಡಿಕೆಗಳಿಗಾಗಿ ದೆಹಲಿಯಲ್ಲಿ ಸತ್ಯಾಗ್ರಹ ಪ್ರಾರಂಭವಾಗಿ ಈವರೆಗೆ 5-6 ಸಾವಿರ ಜನ ಜೈಲಿಗೆ ಹೋಗಿದ್ದಾರೆ. ತಾ|| 30-8-47 ರಲ್ಲಿ ಗೋವಧೆ ನಿರೋಧಕ್ಕಾಗಿ ಮಥುರಾವಲ್ಲಿ ಸತ್ಯಾಗ್ರಹ ಪ್ರಾರಂಭವಾಗಿ ಈವರಿಗೆ ಎರಡು ನೂರು ಜನ ಬಂಧಿತರಾಗಿದ್ದಾರೆ. ಈ ಚಳವಳಿಯ ಪರಿಣಾಮವಾಗಿ ಮಿಾರತ್ ಜಿಲ್ಲೆಯಲ್ಲಿ ಈವರೆಗೆ ಮವಾನಾ, ಹಾಪಡ್‌ಗಡ,ಮುಕ್ತೇಶ್ವರ, ಗಾಜಿಯಾಬಾದ್ ಮೊದಲಾದ ತಾಲ್ಲೂಕುಗಳಲ್ಲಿನ ಮುನ್ಸಿಪಲ್ ಬೋರ್ಡಿನವರು ತಮ್ಮ ಎಲ್ಲೆಯೊಳಗೆ ಗೋವಧೆಯನ್ನು ನಿಲ್ಲಿಸಲು ನಿಶ್ಚಯಿಸಿದ್ದಾರೆ. ಈ ಆದರ್ಶವನ್ನೇ ಎಲ್ಲ ಕಡೆಯವರೂ ಅನುಸರಿಸಿ ಕೀರ್ತಿಶಾಲಿಗಳಾಗಬೇಕೆಂದು ಅ || ಧರ್ಮಸಂಘದವರು ಪ್ರಕಟಣೆ ಹೊರಡಿಸಿದ್ದಾರೆ.

Save the Cow

Woodlands

Morning Shows at 10-30
From 17—10—47 For 3 days

Three Strangers

Featuring—
Sydney Greenstreet
Geraldine Fitzgerald
Peter Lorre

ವುಡ್‌ಲ್ಯಾಂಡ್ಸ್

ಮನಮೋಹನ 3 ನೇ ವಾರ

ರಂಜನ — ಜೀಪರ್ — ಬೇಬಿ ಮಾಧುರಿ
ಪಾತ್ರವಹಿಸಿರುವ

ನೈಮಾ

(ಆಮೋಘ ಹಿಂದಿ ಚಿತ್ರ)
ಪ್ರತಿ ದಿನ 2 ಆಟಗಳು

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ಸಿರಪ್ ರುಚಿ ಸಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —
The Mysore Industrial & Testing Laboratory Ltd..
Malleswaram P. O. Bangalore

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇನಿತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು
ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

Mysore City Municipality

(Works Department)

NOTIFICATION

Sealed tenders will be received up to 4 p. m. on 17-10-47 by the Municipal Engineer for the construction of Maternity Hospital at Nazarbad Mohalla, Mysore.

Each tender must be accompanied with a challan for having remitted Rs- 3000 in the Municipal Treasury as earnest money.

For full particulars please see the detailed nottficaiion on Board.

S, NARAYANASWAMY
Municipal Engineer